ಅವರು ಗ್ರಾಮಗಳಿಗೆ ಹೋಗುವುದನ್ನು ಬಿಟ್ಟು ತಾಲ್ಲೂಕ್‌ಗಳಲ್ಲಿಯೇ ಉಳಿಯುತ್ತಿದ್ದಾರೆಂಬುದು ಸರ್ಕಾರಕ್ಕೆ ಗೊತ್ತಿದೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಈಗ ಗ್ರಾಮಾಂತರ ಪ್ರದೇಶಗಳಲ್ಲಿ ಅನೇಕ ಆಫೀಸರುಗಳಿಗೆ ಮನೆ ಇಲ್ಲ. ಸ್ಕೂಲುಮಾಸ್ಟರ್ ಅನೇಕರು ಸಾಧ್ಯವಾದಷ್ಟು ಬಾಡಿಗೆ ಮನೆಗಳಿಲ್ಲದ್ದುಕೊಂಡೇ ಕೆಲಸ ಮಾಡುತ್ತಿದ್ದಾರೆ. ವಿಲೇಜ್ ಅಧಿಕಾರಿಗಳೂ ಸಹ ಇನ್ನುಮುಂದೆ ಆಫೀಸರ್ಸ್ ಆಗುವುದರಿಂದ ಬೇರೆ ಆಫೀಸರುಗಳಿಗೆ ಏನೇನು ಸೌಕರ್ಯಗಳನ್ನು ಕೊಡುತ್ತಿದ್ದೀವೋ ಅವೆಲ್ಲವನ್ನೂ ಅವರು ಪಡೆಯಲು ಭಾಗಿಗಳಾಗುತ್ತಾರೆ.

ಶ್ರೀ ಜಿ. ವೆಂಕಟೇಗೌಡ.—ಉತ್ತರ ಕನ್ನಡ ಜಿಲ್ಲೆಯಲ್ಲಿರುವ ತಳವಾರ ಮುಂತಾದ ಆಫೀಸರುಗಳಿಗೇ ಅಲ್ಲ ಇತರ ಜಿಲ್ಲೆಗಳಲ್ಲಿಯೂ ಈ ತರಹ ಮನೆಗಳನ್ನು ಗ್ರಾಮಾಂತರ ಆಫೀಸರುಗಳಿಗೆ ಒದಗಿಸಿಕೊಡಲು ಏನಾದರೂ ವ್ಯವಸ್ಥೆ ಮಾಡಿದ್ದೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ಇತರ ಜಿಲ್ಲೆಗಳಲ್ಲಿನ ಆಫೀಸರುಗಳ ವಿಷಯ ಇಲ್ಲಿ ಬಂದಿಲ್ಲ.

ಶ್ರೀ ಕೆ. ಎಸ್. ನೂರ್ಯನಾರಾಯಣರಾವ್.—ಈ ಬಗ್ಗೆ ಏನಾದರೂ ಯೋಜನೆಯನ್ನು ತಯಾರು ಮಾಡಿದ್ದೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ಸರ್ಕಾರೀ ಅಧಿಕಾರಿಗಳು ಲೋ-ಇಕಂ ಹೌಸಿಂಗ್ ಕೋ-ಆಪರೇಟಿವ್ ಸೊಸೈಟಿಯಲ್ಲಿ ಏನೇನು ಪ್ಲಾನುಗಳನ್ನು ಹಾಕಿಕೊಂಡಿದ್ದಾರೋ ಅದರೊಳಗೆ ಇವರು ಸೇರಿಕೊಂಡಿದ್ದಾರೆ.

ಶ್ರೀ ಟಿ. ಡಿ. ದೇವೇಂದ್ರಪ್ಪ.—ಲೋ-ಇಕಂ ಹೌಸಿಂಗ್ ಕೋ-ಆಪರೇಟಿವ್ ಸೊಸೈಟಿ ಮೂಲಕ ಇಂತಹ ಮನೆಗಳನ್ನು ಹೆಚ್ಚಾಗಿ ಕಟ್ಟಿಸುವುದರಿಂದ ಬೇರೆಬೇರೆ ಜಿಲ್ಲೆಗಳಿಗೂ ಅಧಿಕಾರಿಗಳು ಹೋಗಿ ಅಲ್ಲಿಯೇ ಇರ-ವುದಕ್ಕೆ ಸಾಕಷ್ಟು ಅನುಕೂಲವಾಗುವುದಿಲ್ಲವೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಭದ್ರಾವತಿಯಲ್ಲಿ ಬಹಳ ಚೆನ್ನಾಗಿ ಲೊ-ಇಕಂ ಗ್ರೂಪ್ ಹೌಸಿಂಗ್ ಸ್ಕೀಂ ನಡೆದಿದೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಗ್ರಾಮಾಧಿಕಾರಿಗಳಾಗಿರುವವರಿಗೆ ಬಾನದ ಮನೆಗಳಿನ್ನು ಕಟ್ಟಿಸಲಿಕ್ಕೆ ಇದುವರೆಗೆ ಈ ಸರ್ಕಾರ ಯಾವ ಯೋಜನೆಯನ್ನೂ ಕೈಗೊಂಡಿಲ್ಲವೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಬೆಳಗಾಂ ಡಿವಿಜನ್ನಿನಲ್ಲಿ ತಳಾರಿಗಳೆಂದು ವಿಲೇಜ್ ಆಫೀಸರ್ಸ್ ಇದ್ದಾರೆ. ಅವರನ್ನು ತಲಾಟಗಳೆಂದೂ ಕರೆಯುತ್ತಾರೆ. ಕೇವಲ ಎರಡು ಮೂರು ತಿಂಗಳುಗಳಲ್ಲಿ full time ಸರ್ಕಾರೀ ಅಧಿಕಾರಿಗಳಾಗುತ್ತಾರೆ. ಆಗ ಇತರ ಆಫೀಸರುಗಳಿಗಿರುವ ಅನುಕೂಲಗಳೆಲ್ಲ ಇವರಿಗೂ ದೊರೆಯುತ್ತವೆ.

Sri G. V. GOWDA.—In the Statement, it is said that 35 and 85 houses have been constructed under The Village Housing Scheme in North Kanara. May I know whether any house has been allotted to Talathies ?

Mr. SPEAKER.—We are dealing with Question No. 316.

Sri G. V. GOWDA.—I want to know whether any house has been allotted out of those houses which have been constructed under the Village Housing Scheme.

ಶ್ರೀ ಎಂ. ವಿ. ಕೃಷ್ಣಪ್ಪ.—ಅದು ಬೇರೆ ಪ್ರಶ್ನೆಯಾಯಿತು.

Mr. SPEAKER.—Sri Venkate Gowda has stated that in answer to another question, it has been disclosed that there are 49 houses constructed in North Kanara. Has any one or more out of them are allotted to Talathis ?

ಶ್ರೀ ಎಂ. ವಿ. ಕೃಷ್ಣಪ್ಪ.—ಆ ವಿವರ ನನ್ನ ಹತ್ತಿರ ಇಲ್ಲ. ಬಹುಶಃ ತಲಾಟಿಗಳಿಗೆ ಯಾರಿಗೂ ಕೊಟ್ಟಿರಲಾರರು.

ಶ್ರೀ ಎಫ್. ಎಸ್. ತಾವರೆ.—ನಮ್ಮಲ್ಲಿ ತಳವಾರರು ಎನ್ನುವವರು ಯಾರು ? ಅವರು ಯಾವ ಕೆಲಸ ಮಾಡುತ್ತಾರೆ ?

ಶ್ರೀ ಎಂ. ವಿ. ಕೃಷ್ಣಪ್ಪ.—ತಲಾಟಿ ಅನ್ನುವ ಪದಕ್ಕೂ ತಳವಾರರು ಅನ್ನುವುದಕ್ಕೂ ಬಹಳ ವ್ಯತ್ಯಾಸ ಇದೆ.

ಶ್ರೀ ಕೆ. ಎಸ್. ನೂರ್ಯನಾರಾಯಣರಾವ್.—ಮನೆಗಳನ್ನು ಕೊಡುತ್ತೇವೆ ಎಂದು ಹೇಳಿದಿರಿ. ಈಗ ವಿಲೇಜ್ ಹೌಸಿಂಗ್ ಸ್ಕೀಂ ಪ್ರಕಾರ ಮನೆಗಳನ್ನು ಅವರಿಗೆ ರಿನರ್ವ್ ಮಾಡುತ್ತೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ಮಾಡುತ್ತೇವೆ. ತಲಾಟಿಗಳು ಬಹಳ ಬುದ್ಧಿವಂತರು ಮೊದಲು ತಮಗೆ ರಿನರ್ವ್ ಮಾಡಿಸಿಕೊಂಡು ಬೇರೆಯವರಿಗೆ ಕೊಡಿಸುವ ಜನ, ಅವರು.

Maintenance of major irrigation tanks by the Public Works Department.

Q.—435. **Sri M. C. BASAPPA** (Chamarajanagar).—

Will the Government be pleased to state :—

whether the achcutdars of major irrigation tanks in Chamarajanagar Taluk have represented to the Public Works Department that maintenance of these tanks should be taken over by the Public Works Department ?

A.—**Sri ALUR HANUMANTHAPPA** (Deputy Minister for Minor Irrigation).—

Yes.

ಶ್ರೀ ಎಂ. ಸಿ. ಬಸಪ್ಪ.—ಯಾವ ಕೆರೆ ಕೆಳಗಿನ ರೈತರು, ಯಾವಾಗ ಕೇಳಿದರು ಎಂಬುದನ್ನು ಹೇಳುತ್ತೀರಾ ?

†ಶ್ರೀ ಆಲೂರು ಹನುಮಂತಪ್ಪ.—ಮೇಜರ್ ಟ್ಯಾಂಕ್‌ಗಳನ್ನು ಪಿ.ಡಬ್ಲ್ಯೂ.ಡಿ.ಗೆ ತೆಗೆದುಕೊಳ್ಳಬೇಕೆಂದು ಜನರರ್ ರೆಪ್ರಸೆಂಟೇರ್ಷ ಬಂದಿದೆ.

ಶ್ರೀ ಎಂ. ಸಿ. ಬಸಪ್ಪ.—ಯಾವ ಕೆರೆ ಕೆಳಗಿನ ರೈತರಿಂದ, ಯಾವಾಗ ಬಂದಿದೆ ಎಂದು ಕೇಳುತ್ತಾ ಇದ್ದೇನೆ.

ಶ್ರೀ ಆಲೂರು ಹನುಮಂತಪ್ಪ.—ಆ ವಿವರ ಇಲ್ಲ. ಬೇಕಾದರೆ ಒದಗಿಸಿ ಕೊಡುತ್ತೇನೆ.

ಶ್ರೀ ಎಂ. ಸಿ. ಬಸಪ್ಪ.—ಯಾವಾಗ ಕೊಟ್ಟರು ಎಂಬ ತಾರೀಖನ್ನಾದರೂ ಹೇಳುವುದಕ್ಕಾಗುತ್ತದೆಯೇ?

ಶ್ರೀ ಆಲೂರು ಹನುಮಂತಪ್ಪ.—19-3-1962.

ಶ್ರೀ ಎಂ. ಸಿ. ಬಸಪ್ಪ.—ಈಗ ಪಿ. ಡಬ್ಲ್ಯು. ಡಿ. ಇಲಾಖೆಯವರು ವಹಿಸಿ ಕೊಳ್ಳುತ್ತೇವೆ ಎಂದು ಹೇಳಬೇಕಾದರೆ ರೈತರು ಯಾವ ರೂಲ್ಸ್ ಅನುಸರಿಸಬೇಕು ಎಂಬುದನ್ನು ಹೇಳುತ್ತಿರಾ?

ಶ್ರೀ ಆಲೂರು ಹನುಮಂತಪ್ಪ.—ನೋಟೀಸ್.

ಶ್ರೀ ಎಂ. ಸಿ. ಬಸಪ್ಪ.—ಈ ರೀತಿ ಅವರು ವಹಿಸಿ ಕೊಳ್ಳುತ್ತೇವೆ ಎಂದು ಹೇಳಿ, ನರಿಯಾಗಿ ನಿಗಾ ತೆಗೆದುಕೊಳ್ಳದೇ ಮೊನ್ನೆ ಮೊನ್ನೆ ಆದ ಮಳೆಯಿಂದ ಒಂದು ಕೆರೆ ಒಡೆದು ಹೋಗಿ ಒಂದು ಲಕ್ಷ ರೂಪಾಯಿ ನಷ್ಟವಾಗಿದೆ ಎಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಶ್ರೀ ಆಲೂರು ಹನುಮಂತಪ್ಪ.—ಬಂದಿದೆ.

ಶ್ರೀ ಎಂ. ಸಿ. ಬಸಪ್ಪ.—ಯಾವ ಕೆರೆ ಸ್ವಾಮಿ ಅದು?

ಶ್ರೀ ಆಲೂರು ಹನುಮಂತಪ್ಪ.—ನೋಟೀಸ್.

ಶ್ರೀ ಎಸ್. ನಿಜಲಿಂಗಪ್ಪ (ಮುಖ್ಯಮಂತ್ರಿಗಳು).—ಕೆರೆ ಯಾವುದೂ ಒಡೆದಿಲ್ಲ. ನೀವು ಹೇಳುತ್ತಿರುವ ವಿಚಾರ ನಮ್ಮ ಗಮನದಲ್ಲಿದೆ. ರಿಪೇರಿಮಾಡಿಸಿ ಕೊಡಬೇಕೆಂದು ಜನಗಳು ಕೇಳುತ್ತಾ ಇದ್ದಾರೆ.

ಶ್ರೀ ಎಂ. ಸಿ. ಬಸಪ್ಪ.—ಕೆರೆ ಹಳ್ಳಿಕೆರೆ ಬ್ರೀಚ್ ಆಗಿ ಒಂದು ಲಕ್ಷ ರೂಪಾಯಿ ಖರ್ಚು ಮಾಡಬೇಕಾಗಿದೆ. ಈ ರೀತಿ ಒಂದು ಕೆರೆ ಮತ್ತು ರಸ್ತೆ ಕೂಡ ಕೆಟ್ಟು ಹೋಗಿವೆ ಎಂಬುದನ್ನು ಸರ್ಕಾರದವರ ಗಮನಕ್ಕೆ ತರುತ್ತೇನೆ.

Sri S. NIJALINGAPPA.—I thank him for the information.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಜನರಲ್ ರೆಪ್ರಸೆಂಟೇಷನ್ ಬಂದಿದೆ ಎಂದು ಹೇಳಿದಿರಿ. ಸರ್ಕಾರದವರು ವಹಿಸಿಕೊಳ್ಳಬೇಕಾದರೆ ಇಷ್ಟು ಎಕರೆ ಮಿತಿ ಒಳಗೆ ಇದ್ದರೆ ವಹಿಸಿ ಕೊಳ್ಳಬೇಕಾತ್ತದೆ. ಎಷ್ಟು ಕೆರೆಗಳನ್ನು ವಹಿಸಿ ಕೊಳ್ಳಬೇಕೆಂದು ಜನ ಆ ಜನರಲ್ ರೆಪ್ರಸೆಂಟೇಷನ್ ಒಳಗೆ ಮನವಿ ಮಾಡಿಕೊಂಡಿದ್ದಾರೆ?

ಶ್ರೀ ಆಲೂರು ಹನುಮಂತಪ್ಪ.—ಅದು ಸರ್ಕಾರದ ಪರಿಶೀಲನೆಯಲ್ಲಿದೆ. ಬಹಳ ಕೆರೆಗಳು ರೆವಿನ್ಯೂ ಇಲಾಖೆಯವರ ಹತೋಟಿಯಲ್ಲಿವೆ. ಕನಿಷ್ಠಪಕ್ಷ 200 ಎಕರೆ ಇರುವ ಕೆರೆಗಳನ್ನು ತೆಗೆದುಕೊಳ್ಳಬೇಕೆಂದು ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಎಷ್ಟು ಕೆರೆಗಳನ್ನು ವಹಿಸಿಕೊಳ್ಳಬೇಕೆಂದು ರೆಪ್ರಸೆಂಟೇಷನ್‌ನಲ್ಲಿ ಅಡಕವಾಗಿದೆ?

ಶ್ರೀ ಆಲೂರು ಹನುಮಂತಪ್ಪ.—ಆ ಸಮಾಚಾರ ಇಲ್ಲ.

ಶ್ರೀ ಜಿ. ವಿ. ಗೌಡ.—ಮನವಿ ಕೊಟ್ಟಿದ್ದಾರೆ ಎಂದು ಹೇಳಿದ್ದೀರಿ. ಇದುವರೆಗೂ ಪರಿಶೀಲನೆ ಏಕೆ ಮಾಡಿಲ್ಲ?

ಶ್ರೀ ಆಲೂರು ಹನುಮಂತಪ್ಪ.—ಈ ಮನೆಯಲ್ಲಿ ಇರಿಗೇಷನ್ ಬಿಲ್ ಅನ್ನು ಇಂಟ್ರೊಡ್ಯೂಸ್ ಮಾಡಬೇಕಾಗಿದೆ. ಆದ್ದರಿಂದ ಎಷ್ಟು ಕೆರೆಗಳನ್ನು ಪಿ.ಡಬ್ಲ್ಯು.ಡಿ. ಅವರು ತೆಗೆದುಕೊಳ್ಳಬಹುದು ಎನ್ನುವ ವಿಷಯ ಸರ್ಕಾರದವರ ತೀವ್ರ ಪರಿಶೀಲನೆಯಲ್ಲಿದೆ.

ಶ್ರೀ ವಿ. ಮಸಿಯಪ್ಪ.—ನಂಸ್ಥಾನಾ ಮಳೆ ಮೇಜರ್ ಟ್ಯಾಂಕ್ಸ್ ದುರಸ್ತಿ ಕಾರ್ಯವನ್ನು ಸರ್ಕಾರದವರೇ ವಹಿಸಿ ಕೊಳ್ಳುವ ವಿಚಾರವನ್ನು ಪರಿಶೀಲನೆ ಮಾಡುತ್ತಾ ಇದ್ದಾರೆಯೇ?

ಶ್ರೀ ಆಲೂರು ಹನುಮಂತಪ್ಪ.—ಹೌದು.

ಶ್ರೀ ಜಿ. ವಿ. ಗೌಡ.—10 ಎಕರೆ ಅಚ್ಚುಕಟ್ಟಿಗಿಂತ ಹೆಚ್ಚಾಗಿರತಕ್ಕ ಎಲ್ಲಾ ಕೆರೆಗಳನ್ನು ರೆವಿನ್ಯೂ ಇಲಾಖೆಯವರಿಂದ ಪಿ. ಡಬ್ಲ್ಯು. ಡಿ. ಅವರು ವಹಿಸಿ ಕೊಳ್ಳುವುದು ಉತ್ತಮ ಎಂದು ಸರ್ಕಾರದವರು ಒಪ್ಪಿಕೊಂಡಿರಲಿಲ್ಲವೇ?

ಶ್ರೀ ಆಲೂರು ಹನುಮಂತಪ್ಪ.—ಅದು ಸರ್ಕಾರದವರ ಗಮನಕ್ಕೆ ಬಂದಿದೆ. ಈಗ ಹಾಲಿ 10 ಎಕರೆ ಅಚ್ಚುಕಟ್ಟಿನ ಒಳಗಿರುವುದನ್ನು ತಾಲ್ಲೂಕು ಬೋರ್ಡಿಗೆ ಕೊಟ್ಟಿದೆ. ಇನ್ನು ಬಾಕಿ ಕೆರೆಗಳ ವಿಷಯ ಎಷ್ಟು ಸಾಧ್ಯವಾಗುತ್ತದೆಎನ್ನುವುದು ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ದೇಶದಲ್ಲಿ ಮೊನ್ನೆ ಮಳೆಯಾದ ಮೇಲೆ ಎಲ್ಲೆಲ್ಲಿ ಕೆರೆಗಳು ಒಡೆದು ಹೋಗಿವೆಯೋ ಅವೆಲ್ಲಾ ಅವರು ಅಲಕ್ಷ್ಯ ಮಾಡಿ ನರಿಯಾದ ರೀತಿಯಲ್ಲಿ ಇಟ್ಟು ಕೊಳ್ಳದೇ ಇದರಿಂದ ಹೀಗಾಗಿವೆ. ಸರ್ಕಾರದವರು ಈಗಲಾದರೂ ಇದನ್ನು ಯೋಚನೆ ಮಾಡಿ ಈ ಅಧಿವೇಶನದಲ್ಲೇ ಈ ಇರಿಗೇಷನ್ ಬಿಲ್ ಅನ್ನು ಪಾಸ್ ಮಾಡಿಸಿ ಅವುಗಳನ್ನು ತೆಗೆದುಕೊಳ್ಳುವುದಕ್ಕೆ ತೀವ್ರ ಕಾರ್ಯಕ್ರಮ ತೆಗೆದುಕೊಳ್ಳುತ್ತಾರೆಯೇ?

ಶ್ರೀ ಆಲೂರು ಹನುಮಂತಪ್ಪ.—ಕೆಲವೆ ಸಂದರ್ಭಗಳಲ್ಲಿ ಮೇನ್‌ಟೇನ್ ಮಾಡದೇ ಕೆರೆ ಮುಚ್ಚಿ ಒಡೆದು ಹೋಗಿರುವುದು ಇದೆ. ಮತ್ತೆ ಕೆಲವು ಕಡೆ ಈ ಸಾರಿ ಬಹಳ ಹೆಚ್ಚು ಮಳೆಯಾದುದರ ಪರಿಣಾಮವಾಗಿ ಕೆರೆ ಒಡೆದು ಹೋಗಿರುವುದೂ ಇದೆ.

ಶ್ರೀ ಎಂ. ಸಿ. ಬಸಪ್ಪ.—ಮೊನ್ನೆ ತಾನೆ ಒಡೆದು ಹೋದಂಥಾ ಕೆರೆಯನ್ನು ಮುಂದಿನ ಫಸಲು ಬರುವುದರೊಳಗೆ ರಿಪೇರಿ ಮಾಡಿಸಲಕ್ಕೆ ಮನಸ್ಸು ಮಾಡುತ್ತಿರಾ?

ಶ್ರೀ ಆಲೂರು ಹನುಮಂತಪ್ಪ.—ಅದನ್ನು ಮಾಡಲಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಜಿ. ವಿ. ಗೌಡ.—ಪಬ್ಲಿಕ್ ವರ್ಕ್ಸ್ ಇಲಾಖೆಗೆ ಕೆರೆಗಳನ್ನು ಸೇರಿಸಿಕೊಳ್ಳದೇ ರಿಪೇರಿ ಮಾಡಿಸಲಕ್ಕೆ ಅಡಚಣೆ ಏನಾದರೂ ಇದೆಯೇ?

ಶ್ರೀ ಆಲೂರು ಹನುಮಂತಪ್ಪ.—ಅಡಚಣೆ ಇಲ್ಲ. ಅವು ರೆವಿನ್ಯೂ ಕಂಟ್ರೋಲ್‌ನಲ್ಲಿರುವುದರಿಂದ ಪಿ.ಡಬ್ಲ್ಯು.ಡಿ.ಗೆ ತೆಗೆದು ಕೊಳ್ಳಬೇಕಾಗಿದ್ದರೆ ಕೆಲವಾರು ವಿಷಯಗಳಲ್ಲಿ ತೀರ್ಮಾನ ಆಗಬೇಕಾಗಿದೆ. ಅದನ್ನು ಮಾಡುತ್ತಾ ಇದ್ದೇವೆ.

ಶ್ರೀ ಜಿ. ವಿ. ಗೌಡ.—ತೀರ್ಮಾನವಾಗಬೇಕಾದರೆ ಬಹಳ ಕಾಲವಾಗುತ್ತದೆ. ಅದಕ್ಕೂ ಮೊದಲೇ ಈ ಕೆರೆಗಳನ್ನು ದುರಸ್ತಿ ಮಾಡಿಸಲಕ್ಕೆ ಕಾರ್ಯಕ್ರಮ ತೆಗೆದು ಕೊಂಡಿದ್ದೀರಾ?

ಶ್ರೀ ಆಲೂರು ಹನುಮಂತಪ್ಪ.—ಹೌದು. ಅವನ್ನು ತೀವ್ರವಾಗಿ ರಿಪೇರಿ ಮಾಡಿಸುತ್ತೇವೆ.

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ.—ಹೆಚ್ಚು ಮಳೆಯ ಕಾರಣದಿಂದ ಕೆರೆ ಒಡೆದಿದೆ ಎಂದು ಹೇಳಿದರು. ಅಷ್ಟೇ ಅಲ್ಲದೆ ಅಲಕ್ಷ್ಯ ಮಾಡಿದ್ದೂ ಮತ್ತೊಂದು ಕಾರಣ ಎಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಶ್ರೀ ಆಲೂರು ಹನುಮಂತಪ್ಪ.—ಎಲ್ಲಾ ಕೆರೆಗಳ ವಿಷಯದಲ್ಲೂ ಆ ರೀತಿ ಹೇಳುವುದಕ್ಕಾಗುವುದಿಲ್ಲ.

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ.—ಮುಕ್ಕಾಲು ಭಾಗ ಕೆರೆಗಳು ಎಂದು ಹೇಳುವುದಕ್ಕಾಗುತ್ತದೆಯೇ ? (ನಗು !)

(No answer)

Sri D. PARAMESWARAPPA.—I wish to know whether the breaches of many tanks recently are due to bad workmanship of the contractors and whether Government are willing to investigate the matter ?

Sri ALUR HANUMANTHAPPA.—Almost all of them are old tanks. There are no new tanks concerned in the question.

ಶ್ರೀ ಇ. ನಾರಾಯಣಗೌಡ.—ರೆವಿನ್ಯೂ ವಶದಲ್ಲಿರ ತಕ್ಕ ಕೆರೆಗಳ ವಿಷಯದಲ್ಲಿ ಪ್ರತಿ ವರ್ಷವೂ ಆ ಕೆರೆಗಳ ಸ್ಥಿತಿಗತಿಗಳನ್ನು ನೋಡಿಕೊಳ್ಳುವುದಕ್ಕೆ ಅವನ್ನು ಪಿ. ಡಬ್ಲ್ಯೂ. ಡಿ. ಅವರಿಗೆ ವಹಿಸಿದ್ದೀರಾ ?

ಶ್ರೀ ಆಲೂರು ಹನುಮಂತಪ್ಪ —ಹೌದು.

ಶ್ರೀ ಕೆ. ಎಸ್. ಸೂರ್ಯನಾರಾಯಣರಾವ್.—ರೆವಿನ್ಯೂ ಇಲಾಖೆಯಿಂದ ಆ ಕೆರೆಗಳನ್ನು ವಹಿಸಿ ಕೊಳ್ಳುವುದಕ್ಕೆ ಇರತಕ್ಕ ಆತಂಕವೇನು ?

ಶ್ರೀ ಆಲೂರು ಹನುಮಂತಪ್ಪ.—ಆತಂಕವೇನೂ ಇಲ್ಲ. ಮೇನ್‌ಟೆನೆನ್ಸ್‌ಗೆ ಹೆಚ್ಚು ದುಡ್ಡು ಒದಗಿಸ ಬೇಕೆಂಬುವು ಒಂದು ವಿಷಯ. ಈ ಮನೆಯಲ್ಲಿ ಇರಿ ಗೇಷ್ಟ್ ಬಿಲ್‌ಅನ್ನು ಇಂಟ್ರೊಡ್ಯೂಸ್‌ಮಾಡಬೇಕಾಗಿದೆ. ಮಾನ್ಯ ಸದಸ್ಯರು ಹೇಳುವ ಹಾಗೆ ಎಲ್ಲಾ ಕೆ ಗಳನ್ನು ಪಿ. ಡಬ್ಲ್ಯೂ. ಡಿ. ವಹಿಸಿಕೊಂಡರೆ ಮೇನ್‌ಟೆನೆನ್ಸ್ ದೃಷ್ಟಿಯಿಂದ ಒಳ್ಳೆಯದು ಎಂದು ನರ್ಕಾರಕ್ಕೂ ನಹ ಗೊತ್ತಿದೆ. ಅದು ತೀವ್ರ ಆಲೋಚನೆಯಲ್ಲಿದೆ.

ಶ್ರೀ ಟಿ. ಡಿ. ದೇವೇಂದ್ರಪ್ಪ.—ಈಗ ಒಡೆದಿರುವ ಕೆರೆಗಳು ಒಂದೆರಡು ವರ್ಷಗಳ ಹಿಂದೆ ಕಾಂಗಾರಿ ಮಾಡಿದ ಕೆರೆಗಳು ಅಲ್ಲವೇ ?

ಶ್ರೀ ಆಲೂರು ಹನುಮಂತಪ್ಪ.—ಹಾಗೇನೂ ಇಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ರೆವಿನ್ಯೂಯಿಂದ ಪಿ. ಡಬ್ಲ್ಯೂ. ಡಿ. ಗೆ ತೆಗೆದು ಕೂಡಲೆ ದುರಸ್ತು ಮಾಡು ವುದಕ್ಕೆ ನಮ್ಮಲ್ಲಿ ಹಣವಿಲ್ಲ ಎಂದು ತಾವು ಈಗ ಹೇಳಿದಿರಿ. ತಮ್ಮಲ್ಲಿ ಹಣ ಇಲ್ಲದೇ ಇದ್ದರೆ ರೆವಿನ್ಯೂ ಅವರು ಯಾವ ಹೆಡ್‌ನಲ್ಲಿ ಹಣ ಖರ್ಚು ಮಾಡಿ ಕೆರೆ ಮೇನ್‌ಚೇನ್ ಮಾಡುತ್ತಾರೆ ?

ಶ್ರೀ ಆಲೂರು ಹನುಮಂತಪ್ಪ —ಅದಕ್ಕಾಗಿ ರೆಸ್ಪೊರೇಷ್ಟ್ ಆಫ್ ಟ್ಯಾಂಕ್ಸ್‌ಗೆ ಹೆಚ್ಚಿನ ಹಣ ಒದಗಿಸಿ ಅದನ್ನು ಪಿ. ಡಬ್ಲ್ಯೂ. ಡಿ. ಅವರಿಗೆ ವಹಿಸಬೇಕೆಂದು ಆಲೋಚನೆ ಮಾಡುತ್ತಾ ಇದ್ದೇವೆ.

ಶ್ರೀ ಎಂ. ಸಿ. ಬನಪ್ಪ.—ಕೆರೆಹಳ್ಳಿ ಕೆರೆ 'ಬ್ರೀಚ್' ಆಗಿರುವುದು negligence ನಿಂದ ಅಲ್ಲವೇ ?

ಶ್ರೀ ಆಲೂರು ಹನುಮಂತಪ್ಪ.—ಅಲ್ಲ.

ಶ್ರೀ ಎಂ. ಸಿ. ಬನಪ್ಪ.—ಇದು ಹೌದೆ ಅಥವಾ ಅಲ್ಲವೆ ಎಂಬುದನ್ನು ವಿಚಾರ ಮಾಡುತ್ತೀರಾ ?

ಶ್ರೀ ಆಲೂರು ಹನುಮಂತಪ್ಪ.—ಮಾಡುತ್ತೇವೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ನಣ್ಣ ನೀರಾವರಿ ಸಪ್ತಾಹ ಎಂದು ಮಾಡುತ್ತಾರೆ, ಆ ಕಾಲದಲ್ಲಿ ಇಂಥ ಕೆರೆಗಳನ್ನು ಪರಿಶೀಲನೆ ಮಾಡಿ ಏನಾದರೂ ವರದಿ ಮಾಡಿದ್ದಾರೆಯೆ ? ಕೇವಲ ಸಣ್ಣ ಕೆರೆಗಳನ್ನು ರಿಪೇರಿ ಮಾಡುವುದಕ್ಕೆ ಮೂರು ನಾಲ್ಕು ವರ್ಷ ತೆಗೆದು ಕೊಳ್ಳುತ್ತಾರೆ, ಇದಕ್ಕೆ ಕಾರಣವೇನು ?

ಶ್ರೀ ಆಲೂರು ಹನುಮಂತಪ್ಪ.—ಸಾಮಾನ್ಯವಾಗಿ ಹಣದ ಅಭಾವವೇ ಕಾರಣ. ಅದರೂ ಅದಷ್ಟು ಮಟ್ಟಿಗೆ ಮಾಡುತ್ತಿದ್ದೇವೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ತೂಬು ರಿಪೇರಿ ಮಾಡುವುದಕ್ಕೆ ಹಣದ ಅಭಾವವೆಂದರೆ, ಇನ್ನು ಬೃಹದ್ ಯೋಜನೆಗಳನ್ನು ಮಾಡಲು ಹಣವೆಲ್ಲಿ ?

ಶ್ರೀ ಆಲೂರು ಹನುಮಂತಪ್ಪ.—ತೂಬು ರಿಪೇರಿ ಮಾಡಲು ಅಸಿಸ್ಟೆಂಟ್ ಇಂಜಿನಿಯರಿಗೇ ಅಧಿಕಾರ ಕೊಟ್ಟಿದ್ದೇವೆ ; ಅವರು ಮಾಡುತ್ತಿದ್ದಾರೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಅವರು ಮಾಡಿಲ್ಲ ವಾದುದರಿಂದಲೇ ಹಾಗಾಗಿದೆ, ಅದಕ್ಕೆ ನಾವು ಇಲ್ಲಿ ಕೇಳುತ್ತಿರುವುದು.

ಶ್ರೀ ಆಲೂರು ಹನುಮಂತಪ್ಪ.—ತೂಬು ರಿಪೇರಿ ಯಿಲ್ಲದೆ ಈಗ ಕೆರೆಗಳು ಬ್ರೀಚ್ ಆಗಿಲ್ಲ.

Sri D. PARAMESWARAPPA.—May I know whether Government calls for annual reports about the maintenance of the existing tanks ?

Sri ALUR HANUMANTHAPPA.—Yes.

ಶ್ರೀ ಕೆ. ಎಸ್. ಸೂರ್ಯನಾರಾಯಣರಾವ್.—ರೆವಿನ್ಯೂ ಇಲಾಖೆಯವರು ಕೆರೆಗಳ ದುರಸ್ತಿ ಮತ್ತು ಸಾಲಾವಾದು ಕಾಮಗಾರಿಗೆ ಈ ಸಾಲಿನಲ್ಲಿ ಎಷ್ಟು ಹಣ ಖರ್ಚು ಮಾಡಿದ್ದಾರೆ ?

Mr. SPEAKER.—It is too broad a question.

ಶ್ರೀ ಜಿ. ವಿ. ಗೌಡ.—ಮೈನರ್ ನೀರಾವರಿ ಕೆಲಸಗಳಿಗೆ ಕೇಂದ್ರ ಸರ್ಕಾರದವರು ಹೆಚ್ಚು ಹಣ ಕೊಡುತ್ತೇವೆಂದು ಹೇಳಿ, ಎಲ್ಲ ರಾಜ್ಯ ಸರ್ಕಾರಗಳೂ ಈ ಬಗ್ಗೆ ಮನವಿ ಸಲ್ಲಿಸಬೇಕೆಂದು ಕೇಳಿದ್ದಾರೆ, ಅದರಂತೆ ನಮ್ಮ ಸರ್ಕಾರದವರು ಮಾಡಿದ್ದಾರೆಯೆ ? ಆದರೂ ಏಕೆ ಹೆಚ್ಚು ಕೆಲಸ ಮಾಡಿಲ್ಲ ?

ಶ್ರೀ ಆಲೂರು ಹನುಮಂತಪ್ಪ.—ಇದುವರೆಗೂ ಹೆಚ್ಚು ಕೆಲಸ ಮಾಡುವುದಕ್ಕೆ ಏಕೆ ಸಾಧ್ಯವಾಗಿಲ್ಲ ವೆಂದು ಹೇಳಿದ್ದೇನೆ. ಇನ್ನು ಮುಂದೆ ಕೇಂದ್ರ ಸರ್ಕಾರದ ಸಹಾಯ ಪಡೆದು ಈ ಬಾಬಿಗೆ ಹೆಚ್ಚು ಹಣವನ್ನೊದಗಿನಬೇಕೆಂಬ ಯೋಚನೆಯಿದೆ.

ಶ್ರೀ ಎಸ್. ಶಿವಪ್ಪ.—ಮೈನರ್ ಕೆರೆಗಳು ಒಡೆದ ವಿಚಾರ ನಿಮ್ಮ ಗಮನಕ್ಕೆ ಬಂದಿಲ್ಲವೆಂದು ಹೇಳಿದಿರಿ, ನಿಮ್ಮ ಗಮನಕ್ಕೆ ಬರಲು ಎಷ್ಟು ದಿವನವಾಗಬೇಕು ?

ಶ್ರೀ ಆಲೂರು ಹನುಮಂತಪ್ಪ.— ಗಮನಕ್ಕೆ ಬಂಏಡೆ ಎಂದು ಹೇಳಿದ್ದೇನೆ.

ಶ್ರೀ ಕೆ. ಲಕ್ಕಪ್ಪ.—ರೆವಿನ್ಯೂ ಇಲಾಖೆಯವರು ವಹಿಸಿಕೊಂಡಿರುವ ಕೆರೆಗಳೇ ಜಾಸ್ತಿ ಒಡೆದು ಹೋಗಿವೆ ಎಂಬುದು ತಮ್ಮ ಗಮನಕ್ಕೆ ಬಂದಿದೆಯೆ ?

ಶ್ರೀ ಆಲೂರು ಹನುಮಂತಪ್ಪ.—ಸ್ವಲ್ಪ ಹಾಗೆ ಕಾಣುತ್ತದೆ.

ಶ್ರೀ ಎಂ. ವಿ. ಕೃಷ್ಣಪ್ಪ.—ರೆವಿನ್ಯೂ ಇಲಾಖೆಯ ವಶದಲ್ಲಿ ಕೆರೆಗಳ ರಿಪೇರಿ ಕೆಲಸವಿಲ್ಲ. ಎಲ್ಲಾ ಕೆರೆಗಳ ಕೆಲಸವನ್ನೂ ಪಬ್ಲಿಕ್ ವರ್ಕ್ಸ್ ಇಲಾಖೆಯೇ ಮಾಡುವುದು.

Mr. SPEAKER.—We have traversed beyond the time limit for this question.

Sri C. J. MUCKANNAPPA.—There is a controversy between the Minister and the Deputy Minister.

Mr. SPEAKER.—Are you asking a supplementary ?

Sri C. J. MUCKANNAPPA.—I am only bringing this to your notice.

Mr. SPEAKER.—Not during the question hour.

Repairs to the road from Talikote to Malanur.

*Q.—463. Sri S. M. GURADDI (Muddebihal).—

Will the Government be pleased to state :—

(*a*) whether it is not a fact that no repairs have been done to the road from Talikote to Malanur (*i.e.*, upto the border of Gulbarga) in spite of the fact that several Government buses are running from Talikote to Yadagir which is a highway ;

(*b*) whether it is not a fact that no bridges or culverts have been constructed across the streams on the above road ;

(*c*) if so, the reasons therefor ?

A.—Sri VEERENDRA PATIL (Minister for Public Works).—

(*a*) No.

(*b*) Yes.

(*c*) Paucity of funds.

ಶ್ರೀ ಎಸ್. ಎಂ. ಗುರಡ್ಡಿ.—ಪ್ರಶ್ನೆಯ 'ಎ' ಭಾಗಕ್ಕೆ ಉತ್ತರವಾಗಿ 'ನಿಜವಲ್ಲ' ಎಂದು ಹೇಳಿದ್ದೀರಿ, ಈ ರಸ್ತೆಯಲ್ಲಿ ಪ್ರತಿ ದಿನವೂ ಏಳೆಂಟು ಬಸ್ಸುಗಳು ಓಡಾಡುತ್ತಿದ್ದು, ಈಗ ಮಳೆಗಾಲ ಬಂದು ತೊಂದರೆಯಾಗಿರುವುದು ಗೊತ್ತಿದೆಯೆ ?

†Sri VEERENDRA PATIL.—The question was, 'whether it is not a fact that no repairs have been done to the road from Talikote to Malanur...' I said that it was not a fact, but we are doing repair work on this road and we have already spent thousands of rupees on repairs. This is a road taken over by the P.W.D. This road originally belonged to the ex-D.L.B. It was not in a good condition. We have been spending sufficient amounts to bring it to the original condition.

ಶ್ರೀ ಎಸ್. ಎಂ. ಗುರಡ್ಡಿ.—ಈ ರಸ್ತೆ ಪಬ್ಲಿಕ್ ವರ್ಕ್ಸ್ ಇಲಾಖೆಯ ಹತೋಟಿಗೆ ಬಂದು ನಾಲ್ಕೈದು ವರ್ಷಗಳಾಗಿದ್ದರೂ ಇನ್ನೂ ಅದು ರಿಪೇರಿಯಾಗದೇ ಯಿರಲು ಕಾರಣವೇನು ?

Sri VEERENDRA PATIL.—We have been doing this work and we have already spent sufficient amount on this road. We took over this road in 1958 and we have spent the following amounts:

		Rs.
1958-59	...	30,789
1959-60	...	15,743
1960-61	...	6,414
1961-62	...	5,257

In that way every year we have been spending to improve this road.

Sri ANNA RAO GANAMUKHI.—May I know whether Government will give priority to the roads without culverts instead of laying new roads ?

Sri VEERENDRA PATIL.—This comes under the category of roads belonging to ex-D.L.B. taken over by the P.W.D. There is a clear circular about the roads taken over by the P.W.D. as to how to improve them. But this road comes in an altogether different category of roads.

Mr. SPEAKER.—Does the Hon'ble member want that the old roads should be neglected ?

ಶ್ರೀ ಎಸ್. ಎಂ. ಗುರಡ್ಡಿ.—ಈ ರಸ್ತೆ ಮೊದಲು ಯಿಂದಲೂ ಪಬ್ಲಿಕ್ ವರ್ಕ್ಸ್ ಇಲಾಖೆಯ ರಸ್ತೆಯಲ್ಲವೆ ?

Sri VEERENDRA PATIL.—According to the information with me, it belonged to the defunct D.L.B. and was taken over by the P.W.D.

ಶ್ರೀ ಮಹಂತಸ್ವಾಮಿ ವಿರೂಪಾಕ್ಷಯ್ಯ.—ತಾಳಿಕೋಟೆಯಿಂದ ಮಾಲನೂರುವರೆಗೆ ಈ ರಸ್ತೆ ಎಷ್ಟು ಮೈಲಿ ಇದೆ ?

Sri VEERENDRA PATIL.—The length of the road is 9 miles and 1 furlong.

ಶ್ರೀ ಮಹಂತಸ್ವಾಮಿ ವಿರೂಪಾಕ್ಷಯ್ಯ.—ಈ ಒಂಬತ್ತು ಮೈಲಿಯಲ್ಲಿ ಈಗಾಗಲೇ ಒಂದು ಒಂದೂವರೆ ಅಡಿ ಆಳದ ಹಳ್ಳಗಳಾಗಿವೆ ಎಂಬುದು ನಿಮ್ಮ ಗಮನಕ್ಕೆ ಬಂದಿದೆಯೆ ?

ಶ್ರೀ ವೀರೇಂದ್ರ ಪಾಟೀಲ್.—ನಾನು ಮೊದಲೇ ಹೇಳಿದ್ದೇನೆ, ಈ ರಸ್ತೆ ಚೆನ್ನಾಗಿಲ್ಲವೆಂದು. ಈಗಾಗಲೇ ಮೂರೂವರೆ ಮೈಲಿಗೆ ರೀನರ್ಫೇನ್ಸ್ ಮಾಡಿಸಿ, ಎರಡೂವರೆ ಮೈಲಿಗೆ ಅಸ್‌ಫಾರ್ಟ್ ಮಾಡಿಸಲು ಸಾಮಗ್ರಿಗಳನ್ನು ಕೂಡಿಸಲಾಗಿದೆ. ಏಳೂವರೆ ಸಾವಿರ ಮೈಲಿ ಸ್ಪೆಷಲ್ ಫಂಡ್ ರಸ್ತೆ ಎಂದು ತೆಗೆದುಕೊಂಡಿದ್ದೇವೆ. ಇವುಗಳನ್ನು ಸರಿಯಾದ ಸ್ಥಿತಿಯಲ್ಲಡಲು ಕೋಟ್ಯಾಂತರ ರೂಪಾಯಿಗಳು ಖರ್ಚಾಗುತ್ತವೆ. ಪ್ರತಿವರ್ಷವೂ ಎಷ್ಟು ಖರ್ಚು ಮಾಡಬೇಕೆನ್ನುವುದನ್ನು ನಿಗದಿ ಮಾಡಬೇಕಾಗಿದೆ. ಆದಷ್ಟು ಬೇಗ ಹಣ ಒದಗಿದ ಹಾಗೆ ಕೆಲಸಗಳನ್ನು ತೆಗೆದುಕೊಂಡು ಮಾಡುತ್ತೇವೆ.